ಕರ್ನಾಟಕ ವಿಧಾನಸಭೆ

ಗುರುವಾರ 26ನೇ ಮಾರ್ಚ್ 1992

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.20 ಗಂಟೆಗೆ ಸಮಾವೇಶಗೊಂಡಿತು.

[ಉಪಾಧ್ಯಕ್ಷರು: ಶ್ರೀಮತಿ. ನಾಗಮ್ಮ ಸಿ. ಕೇಶವ ಮೂರ್ತಿ ಅವರು ಪೀಠವನ್ನು ಅಲಂಕರಿಸಿದ್ದರು]

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಜ್ಯದಲ್ಲಿರುವ ಗ್ರಾಮ ಲೆಕ್ಕಿಗರ ಹುದ್ದೆಗಳು

441 (2234) ಶ್ರೀ ಆರ್. ಎನ್. ನಾಯಕ್ (ಭಟ್ಕಳ): ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ. ರಾಜ್ಯದಲ್ಲಿರುವ ಗ್ರಾಮ ಲೆಕ್ಕಿಗರ ಹುದ್ದೆಗಳು ಎಷ್ಟು;

ಆ. ಸದರಿ ಖಾಲಿ ಆಗಿರುವ ಹುದ್ದೆಗಳು ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು)-

ಅ. 6468

ಆ. ಜಿಲ್ಲಾವಾರು ಮಾಹಿತಿ ಈ ಕೆಳಗಿನಂತಿದೆ:-

1)	ಬೆಂಗಳೂರು (ನಗರ)	-	5
2)	ಬೆಂಗಳೂರು (ಗ್ರಾಮಾಂತರ)	-	82
3)	ಕೋಲಾರ	-	142
4)	ಶಿವಮೊಗ್ಗ	-	18
5)	ಚಿತ್ರದುರ್ಗ	-	96
6)	ತುಮಕೂರು	-	173
7)	ಮೈಸೂರು	-	125
8)	ಚಿಕ್ಕಮಗಳೂರು	-	58
9)	ಹಾಸನ	-	137
10)	ದಕ್ಷಿಣ ಕನ್ನಡ	-	144
11)	ಮಂಡ್ಯ	-	78
12)	ಕೊಡಗು	-	12
13)	ಗುಲಬರ್ಗಾ	-	196
14)	ಬೀದರ್	-	-
15)	ಬಳ್ಳಾರಿ	-	105
16)	ರಾಯಚೂರು	-	83

17)	ಬೆಳಗಾವಿ	-	133
18)	ಧಾರವಾಡ	-	339
19)	ಉತ್ತರ ಕನ್ನಡ	-	77
20)	ಬಿಜಾಪುರ	-	49
			2034

ಶ್ರೀ ಆರ್. ಎನ್. ನಾಯಕ್:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ರಾಜ್ಯದಲ್ಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆ ಎಷ್ಟು ಎಂದು ಕೇಳಿದ್ದಕ್ಕೆ 10,468 ಎಂದು ಹೇಳಿದ್ದಾರೆ. ಅದರಲ್ಲಿ ಇರುವ ಹುದ್ದೆಗಳ ಬಗ್ಗೆ ಕೇಳಿದಾಗ ಜಿಲ್ಲಾವಾರು ಮಾಹಿತಿ ಕೊಟ್ಟಿದ್ದಾರೆ. ಒಟ್ಟಿಗೆ 2034 ಹುದ್ದೆಗಳು ಖಾಲಿ ಇವೆ ಎಂದು ತಿಳಿದು ಬಂದಿದೆ. ಸುಮಾರಾಗಿ ಮೂರನೇ ಒಂದು ಅಂಶಕ್ಕಿಂತ ಜಾಸ್ತಿ ವಿಲೇಜ್ ಅಕೌಂಟೆಂಟ್ ಹುದ್ದೆಗಳು ಖಾಲಿ ಇವೆ. ಇದು ಬಹಳ ವರ್ಷಗಳಿಂದ ನಡೆದು ಬಂದಿದೆ. ಅದರಲ್ಲೂ ಕೆಲವು ಜಿಲ್ಲೆಗಳಲ್ಲಿ ಬಹಳ ಜಾಸ್ತಿ ಇದೆ, ಉದಾಹರಣೆಗೆ ಕೋಲಾರ, ಬೀದರ್, ಬಳ್ಳಾರಿ ಇಂತಹ ಕಡೆ ಜಾಸ್ತಿ ಇದೆ. ಇಲ್ಲಿ, ಬಹಳ ಪ್ರಮುಖವಾಗಿ ಈ ಹುದ್ದೆಗಳನ್ನು ತುಂಬಿಕೊಳ್ಳಬೇಕಾಗಿದೆ. ತುಂಬಿಕೊಳ್ಳದೇ ಹೋದರೆ ರೆವಿನ್ಯೂ ಇಲಾಖೆಯಲ್ಲಿ ಕೆಳ ಮಟ್ಟದಲ್ಲಿ ಕೆಲಸ ನಡೆಯುವುದಿಲ್ಲ. ಈ ರೀತಿ ಖಾಲಿ ಇರತಕ್ಕ ಹುದ್ದೆಗಳನ್ನು ತುಂಬುವುದಕ್ಕೆ ಏನಾದರೂ ಆಲೋಚನೆ ಮಾಡಿದ್ದೀರಾ ಹೇಗೆ ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ :- ಸನ್ಮಾನ್ಯ ಅಧ್ಯಕ್ಷಿಣಿಯರೇ, ಇದೇ ಪ್ರಶ್ನೆಯನ್ನು ಸನ್ಮಾನ್ಯ ರಾಯರೆಡ್ಡಿಯವರೂ ಕೇಳಿದ್ದಾರೆ. ಕೊನೆಯ ಪ್ರಶ್ನೆ, ಅದೂ ಸಿಮಿಲರ್ ಇದೆ. ಈಗ ಸುಮಾರು 2034 ವೇಕೆನ್ಸಿ ಇದೆ, ನಾನು ಈಗಾಗಲೇ ಪ್ರತಿ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ಡೈಲಿ ವೇಜಸ್ ಮೇಲೆ ಏನು ಕೆಲಸ ಮಾಡುತ್ತಿದ್ದಾರೆ ಅವರನ್ನು ನಾವು ರಿಕ್ರೂಟ್ ಮಾಡಿಕೊಳ್ಳಬೇಕು . ಏತಕ್ಕೆಂದರೆ, ಸುಪ್ರೀಂಕೋರ್ಟಿನಿಂದ ಡೈಲಿ ವೇಜಸ್‌ನವರೆಲ್ಲರಿಗೂ ರೆಗ್ಯುಲರೈಸ್ ಮಾಡಬೇಕೆಂದು ಒಂದು ಆದೇಶ ಬಂದಿದೆ.

ಅವರನ್ನು ರೆಗ್ಯುಲರೈಸ್ ಮಾಡಬೇಕು ಎನ್ನತಕ್ಕಂಥ ಆದೇಶ ಬಂದ ಮೇಲೆ ಆ ಒಂದು ಆದೇಶದ ಪ್ರಕಾರ ಸರ್ಕಾರ ಅವರಿಗೆ ರೆಗ್ಯುಲರೈಸ್ ಮಾಡುತ್ತದೆ. ಯಾವ ಯಾವ ಇಲಾಖೆಗಳಲ್ಲಿ ಎಕ್ಸಸ್ ಹ್ಯಾಂಡ್ಸ್ ಇವೆ ಅವರನ್ನು ಇಲ್ಲಿ ತಂದು ವಿಲೇಜ್ ಅಕೌಂಟೆಂಟ್ಸ್ ಅಂತ ತೆಗೆದುಕೊಂಡು ಅವರಿಗೆ ಟ್ರೈನಿಂಗ್ ಕೊಡಬೇಕು ಎನ್ನತಕ್ಕಂಥ ನಿರ್ಧಾರವನ್ನು ಮಾಡಿದ್ದೇವೆ ಮತ್ತು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಇನ್‌ಸ್ಟ್ರಕ್ಷನ್ಸ್ ಕೂಡ ಕೊಟ್ಟಿದ್ದೇವೆ. ಹಾಗೂ 22ನೇ ತಾರೀಖು ಕೊನೆ ದಿವಸ ಅಂತ ಅವರಿಗೆ ಹೇಳಿದ್ದೇನೆ. ಆದರೆ ಕೆಲವು ಜಿಲ್ಲಾಧಿಕಾರಿಗಳು 31ನೇ ತಾರೀಖುವರೆಗೂ ಟೈಮ್ ಕೇಳಿದ್ದಾರೆ. ಆ 31ನೇ ತಾರೀಖು ಒಳಗೆ ಅವರಿಂದ ನಮಗೆ ಲಿಸ್ಟ್ ಬರುತ್ತದೆ. ಆ ಲಿಸ್ಟ್ ಬಂದ ನಂತರ ಅಪ್ರೂವ್ ಮಾಡಿ ಪ್ರತಿಯೊಂದು ಜಿಲ್ಲೆಗಳಿಗೂ ನಾವು ಕಳುಹಿಸುತ್ತೇವೆ. ಮಾನ್ಯ ಸದಸ್ಯರಾದ ನಾಯಕ್‌ರವರು ಹೇಳತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ಅನೇಕ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಹಾಗೂ ಹಳ್ಳಿಗಳಲ್ಲಿ ಸಾಕಷ್ಟು ವೆಕೇನ್ಸಿಸ್ ಇವೆ ಮತ್ತು ಇದರಿಂದ ನಮ್ಮ ಕೆಲಸ ಕೂಡ ಕುಂಠಿತವಾಗಿದೆ. ಅದರಲ್ಲೂ ವಿಶೇಷವಾಗಿ ರೆಗ್ಯುಲರೈಸೇಷನ್ ಆಫ್ ಆಥರೈಜ್ಡ್ ಆನ್ ಎನ್‌ಕ್ರೋಚ್‌ಮೆಂಟ್ ಏನು ಇದೆ ಅದನ್ನು ರೆಗ್ಯುಲರೈಸ್ ಮಾಡತಕ್ಕಂಥಾದ್ದು, ಲ್ಯಾಂಡ್

ರಿಫಾರಮ್ಸ್‌ನಲ್ಲಿ ಆಗತಕ್ಕಂಥ ಕೆಲಸ . ಇದೆಲ್ಲಾ ಕೂಡ ಇದು ಒಂದೇ ಇಲಾಖೆ ಕೆಲಸ ಅಲ್ಲ , ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ರೆವಿನ್ಯೂ ಇಲಾಖೆಯವರು ಬೇರೆ ಬೇರೆ ಇಲಾಖೆಯವರು ಕೆಲಸ ಪಡಿಸಿಕೊಂಡು ಮಾಡುತ್ತಾರೆ. ಫುಡ್ ಆಯಿತು ಸೆನ್ಸಸ್ ಆಯಿತು ಎಲೆಕ್ಷನ್ಸ್ ಇವೆಲ್ಲಾ ಕೆಲಸ ಇವತ್ತು ಅವರು ಮಾಡಬೇಕಾಗುತ್ತದೆ. ಈ ಎಲ್ಲಾ ಇಲಾಖೆಗಳಿಂದ ಪೆಟ್ಟು ಬೀಳುತ್ತದೆ. ಅದಕ್ಕೆ ನಾವು ಒಂದು ನಿರ್ಧಾರವನ್ನು ಈ ಒಂದು ಆಧಾರದ ಮೇಲೆ ನಿರ್ಣಯ ತೆಗೆದುಕೊಂಡು ಬೇಗನೇ ರೆಗ್ಯುಲರೈಸ್ ಮಾಡಬೇಕೆನ್ನುವ ನಿರ್ಧಾರ ಮಾಡಿದ್ದೇವೆ, ಅದು ಆಗುತ್ತದೆ.

ಶ್ರೀ ಆರ್. ಎನ್. ನಾಯಕ್:- ಮಾನ್ಯ ಅಧ್ಯಕ್ಷರೇ, ಈಗ ಡೈಲಿವೇಜಸ್ ಮೇಲೆ ಇರುವವರನ್ನು ಈ ಹುದ್ದೆಗಳಿಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ ತುಂಬಾ ಸಂತೋಷ. ಇದು ಒಳ್ಳೆಯ ನಿರ್ಧಾರ ಕೂಡ. ಆದರೆ ಹೀಗೆ ತೆಗೆದುಕೊಳ್ಳುವಾಗ ಸಂದರ್ಶನಕ್ಕೆ ಕರೆಯುತ್ತೀರೋ ಹೇಗೆ ? ಕರೆದಾಗ ರೋಸ್ಟರ್ ಸಿಸ್ಟಂ ಅಪ್ಲೈ ಮಡುತ್ತೀರಾ ? ಮತ್ತು ಕೆಲವು ಸಲ ಏನಾಗುತ್ತದೆ ಪರಿಶಿಷ್ಟ ವರ್ಗ ಬ್ಯಾಕ್‌ವರ್ಡ್ ಕ್ಯಾಸ್ಟ್ ಹಾಗೂ ಬೇರೆ ವರ್ಗದವರು ಸಿಕ್ಕದೆ ಇರಬಹುದು;ಅಂತಹ ಸಂದರ್ಭದಲ್ಲಿ ಈ ಹುದ್ದೆಗಳನ್ನು ಅವರಿಗೆ ಕಾಯ್ದಿರಿಸುತ್ತೀರಾ? ಇಲ್ಲಾ ಏನು ಮಾಡುತ್ತೀರಿ? ದಯಮಾಡಿ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಡೈಲಿ ವೇಜಸ್ ಮೇಲೆ ಕೆಲಸ ಮಾಡುತ್ತಿರುವವರನ್ನು ರೆಗ್ಯುಲರೈಸ್ ಮಾಡುವಾಗ ರೋಸ್ಟರ್ ಸಿಸ್ಟಂ ಪ್ರಕಾರ ಮಾಡಬೇಕು, ಒಂದು ವೇಳೆ ಉದಾಹರಣೆಗೆ ಎ ಬಿ ಸಿ ಡಿ ಕೆಟಗರಿಗಳಲ್ಲಿ ಅಭ್ಯರ್ಥಿಗಳು ಸಿಕ್ಕದೆ ಹೋದರೆ ಅವರಿಗೆ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡಬೇಕೆಂದು ನಿರ್ಧಾರ ತೆಗೆದುಕೊಂಡಿದ್ದೇವೆ. ಅದಕ್ಕೆ ಒಂದು ರೋಸ್ಟರ್‌ಸಿಸ್ಟಂ ವಾಯಿಲೇಟ್ ಮಾಡತಕ್ಕಂಥಾದ್ದು ಆಗಲಿ ಅಥವಾ ಈ ಬೇಕೆನ್ಸೀಸ್ ಬೇರೆಯವರಿಗೆ ಕೊಡತಕ್ಕಂಥಾದ್ದು ಆಗಲೀ ಮಾಡುವಂತಿಲ್ಲ.

Sanction of land for prawn farming in Dakshina Kannada District.

443 (2295) Shri Baburao Chinchana Sur (Chittapur):- Will the Minister of State for Fisheries, Ports and Inland Water Transport be pleased to state-

a) whether the Government has come forward to sanction land for prawn business merchants in the Districts of Dakshina Kannada and Uttara Kannada ;

b) if so, on what basis and to whom these lands will be sanctioned ;

c) whether preference will be given to unemployed youths (Fishermen) and poor fishermen ;

d) whether the Government has agreed to sanction for the big entrepreneurs from other States ;

e) if so, name of the entrepreneurs/Institutions ;